ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ,
ಬಾಗಲಕೋಟೆ-02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O & M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2021-22/ 7371-7376 ದಿನಾಂಕ: 26 NOV 2022

ದಿನಾಂಕ: 10.11.2021 ರಂದು ಬೆಳಿಗ್ಗೆ 11.30 ಘಂಟೆಗೆ ಶ್ರೀ ಕಾಶೀನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು: 1) ಶ್ರೀ. ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಗ್ರಾಮೀಣ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ.
3) ಶಾಖಾಧಿಕಾರಿ ಕಾ ಮತ್ತು ಪಾ ಶಾಖೆ ಹೆಸ್ಕಾಂ, ಗದ್ದನಕೇರಿ
4) ಶ್ರೀಮತಿ. ಮಂಜುಳಾ ಭ. ಪಾಟೀಲ, ಜಿ.ಪಿ. ನಂ:2250, ಗದ್ದನಕೇರಿ ಗ್ರಾಮ, ಪೋ:ಗದ್ದನಕೇರಿ, ತಾಜಿ: ಬಾಗಲಕೋಟೆ

<u>ಪ್ರಕರಣ ಸಂಖ್ಯೆ: 05/2021</u>

ಶ್ರೀಮತಿ. ಮಂಜುಳಾ ಭ. ಪಾಟೀಲ,
ಪೋ:ಗದ್ದನಕೇರಿ, ತಾಜಿ: ಬಾಗಲಕೋಟೆ ------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಗ್ರಾಮೀಣ ಉಪ-ವಿಭಾಗ
ಹುವಿಸಕಂನಿ.,ಬಾಗಲಕೋಟೆ. ------- ಪ್ರತಿವಾದಿ

**ವಿಷಯ: "ವಿದ್ಯುತ್ ಸಂಪರ್ಕ ನೀಡದಿರುವ ಕುರಿತು."**

*&*&*

ಪ್ರಕರಣ ಸಂಖ್ಯೆ: 05/2021 ರಕ್ಕೆ ಸಂಬಂಧಿಸಿದಂತೆ, ದಿನಾಂಕ:10.11.2021 ರಂದು ಬೆಳಿಗ್ಗೆ 11.00 ಘಂಟೆಗೆ ಶ್ರೀ ಕಾಶೀನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೊಟೆ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ ಅಧಿಕಾರಿಗಳು/ ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

<u>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಗ್ರಾಮೀಣ ಉಪ-ವಿಭಾಗ ಹೆಸ್ಕಾಂ ಬಾಗಲಕೋಟೆ ರವರ ಹೇಳಿಕೆ:</u>

ಸದರೀ ಸ್ಥಾವರದ ಸ್ಥಳದಲ್ಲಿ ಯಾವುದೇ ಇನ್‌ಫ್ರಾಸ್ಟ್ರಕ್ಚರ್ ಇರುವದಿಲ್ಲ. ಗ್ರಾಹಕರಿಗೆ ಪತ್ರದ ಮುಖಾಂತರ ಸದರ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ತಿಳಿಸಲಾಗಿದೆ. ಶಾಖಾಧಿಕಾರಿಗಳು ಗದ್ದನಕೇರಿ ರವರ ಪತ್ರ ಸಂಖ್ಯೆ:ಬಾಗ/ಗದ್ದ/ಶಾಅ/ಮೇ/2021-22/133-34 ದಿನಾಂಕ:04-08-2021 ಒಂದು ಕಿಲೋವ್ಯಾಟ್ ಗೃಹ

ಬಳಕೆಯ ಮನೆಗೆ ವಿದ್ಯುತ್ ಪೂರೈಸಲು ಅರ್ಜಿ ಸಲ್ಲಿಸಿದ ಪ್ರಯುಕ್ತ ಆಸ್ತಿಯ ಉತಾರದ ನಮೂನೆ-11ಬಿ ನಿಯಮ 30(7) ರ ಪ್ರಕಾರ ಪ್ರತಿಗಳನ್ನು ಸಲ್ಲಿಸಿರುತ್ತೀರಿ. ಸದರೀ ನಮೂನೆ-11ಬಿ ದಲ್ಲಿ ಈ ಆಸ್ತಿ ಇರುವ ಸ್ಥಳವು ದಿನಾಂಕ:30-06-2011 ತಹಶೀಲ್ದಾರ ಕಂದಾಯ ಯೋಜನಾ ಇಲಾಖೆಯಿಂದ ಅನುಮೋದಿತ ಬಡಾವಣೆಯಾಗಿರುತ್ತದೆ. ಆದ್ದರಿಂದ ಸದರೀ ಅನುಮೋದಿತ ಬಡಾವಣೆ ಬಿನ್-ಶೇತ್ಕಿಯ ಆದೇಶದ ಪ್ರತಿ ಹಾಗೂ ಬಡಾವಣೆ ನಕ್ಷೆ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದ್ದು, ಅದರಂತೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಗದ್ದನಕೇರಿ ವಿಳಾಸಿಸಿ ಪತ್ರ ಸಂಖ್ಯೆ:ಬಾಗ/ಗದ್ದ/ಶಾಅ/ಮೇ/2021-22/135-38 ದಿನಾಂಕ:04-08-2021 ರಲ್ಲಿ ಶ್ರೀಮತಿ. ಮಂಜುಳಾ ಭ. ಪಾಟೀಲ ಹೆಸರಿನಲ್ಲಿರುವ ಆಸ್ತಿ ಜಿ.ಪಿ:2250 ಆಗಿರುತ್ತದೆ. ಇವರು ಗೃಹಬಳಕೆಯ ಮನೆಗೆ ವಿದ್ಯುತ್ ಪೂರೈಸಲು ಕೋರಿರುತ್ತಾರೆ. ನಮೂನೆ-11(ಬಿ) ನಿಯಮ 30(7) ರಡಿಯಲ್ಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ನಮೂನೆ-11ಬಿ ದಲ್ಲಿ ಈ ಆಸ್ತಿ ಇರುವ ಸ್ಥಳವು ದಿನಾಂಕ:30-06-20011 ತಹಶೀಲ್ದಾರ ಕಂದಾಯ ಯೋಜನಾ ಇಲಾಖೆಯಿಂದ ಅನುಮೋದಿತ ಬಡಾವಣೆಯಾಗಿರುತ್ತದೆ. ಸದರೀ ಅನುಮೋದಿತ ಬಡಾವಣೆಯು ಯಾವಾಗ ನಿಮ್ಮ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗಿರುತ್ತದೆ ಎಂಬ ಮಾಹಿತಿಯನ್ನು/ದಾಖಲೆಗಳನ್ನು ನೀಡಲು ಕೋರಲಾಗಿದೆ ಎಂದು ತಿಳಿಸಿದರು.

**ಶ್ರೀಮತಿ. ಮಂಜುಳಾ ಭ. ಪಾಟೀಲ ರವರ ಪ್ರತಿನಿಧಿ ರಂಗನಾಥ ಎಮ್ ಪಾಡಮುಖೆ, ನವನಗರ ಬಾಗಲಕೋಟೆ ರವರ ಹೇಳಿಕೆ :**

ಸದರ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ಬರೆದ ಪತ್ರಗಳು ಇದೂವರೆಗೆ ನಮಗೆ ತಲುಪಿರುವದಿಲ್ಲವೆಂದು ತಿಳಿಸಿರುತ್ತಾರೆ.

**ಆ ದೇ ಶ**

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2021-22/ 1371-1376 ದಿನಾಂಕ:26-11-2022

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಗ್ರಾಮೀಣ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ ಹಾಗೂ ಶಾಖಾಧಿಕಾರಿ ಗದ್ದನಕೇರಿ ಇವರಿಗೆ ಸದರೀ ವಿಷಯಕ್ಕೆ ಬರೆದ ಪತ್ರಗಳನ್ನು ದೂರುದಾರರಿಗೆ ಸಲ್ಲಿಸಿ ಹಾಗೂ ಗ್ರಾಹಕರಿಂದ ಅಗತ್ಯ ದಾಖಲೆಗಳನ್ನು ಪಡೆದು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿ ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ಎಸ್ ಜಿ ಸಾತಿಹಾಳ
ಉಪ-ಲೆಕ್ಕನಿಯಂತ್ರಣಾಧಿಕಾರಿ,
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟ.

ಅಧ್ಯಕ್ಷರು
(ಕಾಶೀನಾಥ.ಜಿ ಹಿರೇಮಠ.)
ಅಧೀಕ್ಷಕ ಅಭಿಯಂತರರು(ವಿ) ಬಾಗಲಕೋಟೆ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.ಬಾಗಲಕೋಟೆ.

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಗ್ರಾಮೀಣ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
5) ಶಾಖಾಧಿಕಾರಿಗಳು ಕಾ ಮತ್ತು ಪಾ ಶಾಖೆ ಹೆಸ್ಕಾಂ ಗದ್ದನಕೇರಿ.
6) ಶ್ರೀಮತಿ. ಮಂಜುಳಾ ಭ. ಪಾಟೀಲ, ಜಿ.ಪಿ. ನಂ:2250, ಗದ್ದನಕೇರಿ ಗ್ರಾಮ, ಪೋ:ಗದ್ದನಕೇರಿ, ತಾಜಿ: ಬಾಗಲಕೋಟೆ
7) ಕಛೇರಿ ಪ್ರತಿ/ಪ್ರಧಾನ ಕಡತ.